ಅವರಿಗೆ ಬೇಕಾದ್ದನ್ನೆಲ್ಲ ಮಾಡಿಕೊಟ್ಟು ಮನೆ ನೋಡಿಕೊಂಡು ಮಾಮೂಲಾದಳು. ಇಡೀ ಕುಟುಂಬ 'ಉಶ್' ಎಂದು ಉಸಿರು ಬಿಟ್ಟಿತು.

ಉಹ್ಞೂಂ.. ಸುಧಾರಿಸಿಕೊಂಡ ತಿಂಗಳೊಪ್ಪತ್ತಿನಲ್ಲೇ ಮತ್ತೆ ಆರಂಭವಾಯಿತು ಕನಸೆಂಬ ಪೀಡೆ. ಮತ್ತದೇ ವ್ಯಕ್ತಿ ಗಹಗಹಿಸಿದ ಹಾಗೆ. ಅದೇ ಕಣ್ಣುಗಳು ಗರಗರ ತಿರುಗುತ್ತಿದ್ದವು. ಈ ಬಾರಿ ಹಿಮಾಲಯದ ತುತ್ತ ತುದಿಗೆ ನಿಂತು, "ಎಲ್ಲಾ ಮುಗೀಲಿಕ್ಕತ್ತು. ನಿಲ್ದಾಣ ಬಂತು" ಎಂದಿದ್ದ. ಬೆವೆತು ನೀರಾಗಿದ್ದಳವಳು. ಮತ್ತೆ ವೈದ್ಯರ ಬಳಿ ಓಡಿದರು. ಮಾತ್ರೆಗಳನ್ನು ತಂದರೂ ತೆಗೆದುಕೊಳ್ಳುವ ಮನಸ್ಸಾಗುತ್ತಿಲ್ಲ ಅವಳಿಗೆ. ಆಗಲೇ ಅವಳ ಸ್ನೇಹಿತೆಯೊಬ್ಬಳು, "ಹೆಣಮಕ್ಕಳ ಮನಸ್ಸಾಗಿರೋದು ತಾಯಿಗಷ್ಟ ಗೊತ್ತಾಗ್ತದಂತ. ತವರಿಗೆ ಸ್ವಲ್ಪ ದಿನ ಕಳಸ್ರಿ. ಅಂದ್ರ ಆರಾಮಾಗ್ತಾರ" ಎಂದಳು. ನಿಜವೆನಿಸಿತು ಸಂಜಯನಿಗೆ. ಜೊತೆಗೆ ಇಷ್ಟು ದಿನಗಳವರೆಗೆ ಹೊಳೆಯಲೇ ಇಲ್ಲವಲ್ಲ ಎನಿಸಿದ್ದುಂಟು. ಸುಜಾತಳ ತವರು ಬಿಜಾಪುರ. ಅವಳ ಮದುವೆಯಾಗಿ ವರ್ಷದಲ್ಲೇ ತಂದೆ ತೀರಿಹೋಗಿದ್ದರು. ಅಣ್ಣ ಪ್ರದೀಪ ಪಾಪದವ. ಸುಮಾರಾದ ಕೆಲಸದಲ್ಲಿದ್ದ. ಅತ್ತಿಗೆ ವೃಂದಾ ಬಲು ಜೋರು. ಧಿಮಾಕಿನವಳು ಕೂಡ. ಗಾಂಧಿ ಚೌಕದಲ್ಲೇ ಹಳೆಯ ಮನೆಯಿತ್ತು. ತಾಯಿ ಲಕ್ಷ್ಮೀಬಾಯಿಗೆ ಈಗ ಯಾವುದೂ ಕೈಲಾಗುತ್ತಿಲ್ಲ. ಮನೆಯಲ್ಲಿ ಓಡಾಡುವುದೂ ಕಷ್ಟ. ತೀರ ನಿಶ್ಯಕ್ತರಾಗಿದ್ದರು. ಇಂಥ ಸಮಯದಲ್ಲೇ ಸಂಜಯ ಇಡೀ ಪರಿವಾರದೊಡನೆ ಬಂದಿಳಿದ. ಅಪರೂಪಕ್ಕೆ ಬಂದ ಅಳಿಯನಿಗೆ ರಾಜೋಪಚಾರವಾಯಿತು. "ಹೆಂಗಿದ್ದೀರಿ?" ಎಂದು ಸಂಜಯ ಅತ್ತೆಗೆ ಕೇಳಿದಾಗ, "ಹಿಂಗಿದ್ದೇನಿ ನೋಡ್ರಿ. ಎಲ್ಲಾ ಕಂಡಾಗೇದ. ಸುಸೂತ್ರ ಯಾರಿಗೆ ತ್ರಾಸು ಕೊಡದ ಹೋದ್ರ ಸಾಕು" ಎಂದು ಕಣ್ಣು ಹನಿಸಿದರು. ಜೊತೆಗೆ, "ಕುಲದೇವರು ತೊರವಿ ನರಸಪ್ಪಗ... ಯಲಗೂರ ಹನುಮಂತದೇವ್ರಿಗೆ ಹೋಗದ ಆರು ವರ್ಷಾತು. ಒಮ್ಮೆ ದರ್ಶನಾದ್ರ..." ಎಂದು ಕಣ್ಣೊರೆಸಿಕೊಂಡರು. "ಅವ್ರಿಗೆ ಬಸ್‌ನ್ಯಾಗ ಬರ್ಲಿಕ್ಕಾಗೂದುಲ್ಲ. ನಮಗ ಕಾರು ಮಾಡಿ ಕರಕೊಂಡ್ಹೋಗಲಿಕ್ಕಾಗೂದುಲ್ಲ. ಏನ ಮಾಡೋದು?..." ಎಂದು ಅತ್ತಿಗೆ ಅಡಿಗೆ ಮನೆಯೊಳಗಿಂದಲೇ ಖಾರವಾಗಿ ಪ್ರತಿಕ್ರಿಯಿಸಿದಳು. ಸುಜಾತ ಸೂಕ್ಷ್ಮವಾಗಿ, "ನಾನೂ ನೋಡಿ ಇಪ್ಪತ್ತು ವರ್ಷಾತು" ಎಂದಳು. ಸಂಜಯನೇ ಗಾಡಿ ಮಾಡಿ ಎಲ್ಲರನ್ನೂ ಕರೆದೊಯ್ದು ದರ್ಶನ ಮಾಡಿಸಿದಾಗ ಲಕ್ಷ್ಮೀಬಾಯಿ ಧನ್ಯತೆಯಲ್ಲಿ ಮಿಂದು ಅಳಿಯನಿಗೆ ಕೈ ಮುಗಿದಿದ್ದರು. ಅಂದೇ ರಾತ್ರಿ ಅವನು ಮಕ್ಕಳೊಡನೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದ. ಸುಜಾತಳನ್ನು ಬೇಕೆಂದೇ ತವರಿನಲ್ಲಿ ಕೆಲದಿನಗಳವರೆಗೆ ಬಿಟ್ಟಿದ್ದಾಗಿತ್ತು.

ಸಂಜಯ, ಮಕ್ಕಳು ತೆರಳಿದ ನಂತರ ಮನೆಯ ಚಿತ್ರವೇ ಬದಲಾಯಿತು. ಅತ್ತೆಯ ಬಗ್ಗೆ ಅಸಹನೆಯಿಂದ ವೃಂದಾ ಕ್ಷಣಕ್ಷಣಕ್ಕೂ ಸಿಡುಕುತ್ತಿದ್ದಳು. ಅಣ್ಣ ಒಳ್ಳೆಯವನೇ. ಆದರೆ ಅವನದೇನೂ ನಡೆಯುತ್ತಿರಲಿಲ್ಲ. ಬಚ್ಚಲಿಗೂ ಅವನೇ ಕರೆದೊಯ್ಯಬೇಕಿತ್ತು. "ಸಾಕಾಗಿಬಿಟ್ಟದ ಸುಜಿ... ಯಾಕರೇ ಜೀವಂತ ಇದ್ದೇನೋ ಅನಸ್ತದ. ಮಾತುಮಾತಿಗೂ ವೃಂದಾ ಚುಚ್ಚಿ ಹಾಕ್ತಾಳ. ನಾ ಈ ಕಡಿಕಾಲಕ್ಕ ಬದುಕಿ ಬಾಳಿದ ಮನಿ ಬಿಟ್ಟು ಎಲ್ಲೂ ಹೋಗೂದುಲ್ಲ. ಅದು ಅಕಿಗೆ ಬ್ಯಾಸರ. ಪುಣ್ಯಾಕ್ಕ ಅಳಿಯಂದ್ರು ಭಂಗಾರಧಂಗ ಇದ್ದಾರ. ನೀ ನಿನ್ನ ಮನ್ಯಾಗ ಆರಾಮಿದ್ದಿ. ಅದೊಂದ ಸಮಾಧಾನ ನನಗ..." ಎಂದು ಕಣ್ಣೀರು ಮಿಡಿದಿದ್ದರು. ಯಾವ ಮಾಯದಲ್ಲೋ ಕೇಳಿಸಿಕೊಂಡ ವೃಂದಾ, "ಅವರನ್ಯಾಕ... ಆ ಯಮದೂತರು ಮದ್ಲ ನನ್ನ ವೈದು ಬಿಡ್ಲಿ. ಕರದ್ರ ಸಾಕು ಸಂತೋಷದಿಂದ ನಾ ಅವರ ಜೋಡಿ ಹೋಗಿಬಿಡ್ತೇನಿ. ನನ್ನ ಫೋಟೊ ಸುದ್ಧಾ ಹಾಕದನ ಮನ್ಯಾಗ ಆರಾಮ ಇರ್ರಿ. ಎಷ್ಟಂತ ಮಾಡ್ಲಿ? ಸುಡ್ಲಿ... ಜೀವನ ಸಾಕಾಗಿ ಹೋಗೇದ" ಎಂದು ಕೂಗಾಡಿದಳು. ಮರೆತೇ ಹೋಗಿದ್ದ ಯಮದೂತ... ಅವನ ಕರೆ... ಕನಸು... ಸುಜಾತಳಿಗೆ ಥಟ್ಟನೆ ಜ್ಞಾಪಕಕ್ಕೆ ಬಂದು ಕಂಪಿಸಿದಳು. ಅಣ್ಣ, ಅತ್ತಿಗೆಗೆ ಹೇಳಿ ಪ್ರಯೋಜನವಿಲ್ಲ. ಮತ್ತೆ ಕೊಂಕು ಮಾತು ಕೇಳಬೇಕಾದೀತು. ತಾಯಿಯ ಬಳಿ ಹೇಳಿಕೊಂಡು